






# ಸಂಗೀತ-ಸಾಹಿತ್ಯದ ಆನಂದ

ಸಾಕ್ಷಿ

July 13, 2012 Share [-] Text [+]



`ಹಂಸಾನಂದಿ' ಹೆಸರಿನಲ್ಲಿ ಬ್ಲಾಗ್ ಬರೆಯುತ್ತಿರುವ ಕೆ.ವಿ. ರಾಮ್‌ಪ್ರಸಾದ್ ಒಂದು ಕಾಲನ್ನು ಕನ್ನಡ ನೆಲದಲ್ಲೂ ಇನ್ನೊಂದು ಕಾಲನ್ನು ಅಮೆರಿಕದಲ್ಲೂ ಊರಿರುವ ಸಂಗೀತ ಪ್ರೇಮಿ. `ಹಂಸನಾದ' (hamsanada.blogspot.in)) ಅವರ ಬ್ಲಾಗ್ ಹೆಸರು.

ತಮಗಿಷ್ಟವಾದ ಸಂಸ್ಕೃತ ಸುಭಾಷಿತಗಳನ್ನು ಕನ್ನಡಕ್ಕೆ ಅನುವಾದಿಸಿ ಈ ಬ್ಲಾಗ್‌ನಲ್ಲಿ ಪ್ರಕಟಿಸಿದ್ದಾರೆ. ಅಂದಹಾಗೆ, ಅನುವಾದಿತ ಸುಭಾಷಿತ ಪದ್ಯಗಳ ಸಂಕಲನ `ಹಂಸನಾದ' ಹೆಸರಿನಲ್ಲಿ ಪುಸ್ತಕ ರೂಪದಲ್ಲೂ ಪ್ರಕಟವಾಗಿದೆ.

Topics

ಹಂಸಾನಂದಿ ,
ಕೆ.ವಿ. ರಾಮ್‌ಪ್ರಸಾದ್ ,
ಬ್ಲಾಗ್ ,

ಈ ವಿಭಾಗದಿಂದ ಇನ್ನಷ್ಟು

`ಜಂಬೂ ಫಲಾನಿ ಪಕ್ವಾನಿ / ಪತಂತಿ ವಿಮಲೇ ಜಲೇ / ಕಪಿ ಕಂಪಿತ ಶಾಖಾಭ್ಯಾಂ / ಗುಳುಗುಗ್ಗುಳು ಗುಗ್ಗುಳು' ಎನ್ನುವುದೊಂದು ಸಂಸ್ಕೃತದ ಮಾತು. ಅದನ್ನು ರಾಮ್‌ಪ್ರಸಾದ್ ತಿಳಿಕನ್ನಡಕ್ಕೆ ತಂದಿರುವುದು ಹೀಗೆ- `ಅಲುಗಾಡಿಸಿ ಕಪಿ ರೆಂಬೆಗಳ / ಕಳಿತಿಹ ನೇರಳೆ ಹಣ್ಣುಗಳು / ಕೊಳದಲಿ ಬೀಳುತ ಸಪ್ಪಳವು / ಗುಳುಗುಳು ಗುಗ್ಗುಳು ಗುಗ್ಗುಳು'. ಈ ಗುಳುಗುಳು ಗುಗ್ಗುಳು ಕಾವ್ಯದಲ್ಲಿನ ಒಂದು ಚಮತ್ಕಾರವಲ್ಲವೇ? `ಹಂಸನಾದ' ಬ್ಲಾಗ್‌ನಲ್ಲಿನ ಬರಹಗಳ ಸೊಗಸನ್ನು ಓದಿಯೇ ತಿಳಿಯಬೇಕು.

`ವಸಂತನ ತಪ್ಪು', `ಹೆಂಗಸರ ಸಿಂಗಾರ', `ಅರುಂಧತೀ ದರ್ಶನ'- ಹೀಗೆ, ರಾಮ್‌ಪ್ರಸಾದ್‌ರ ಬರಹಗಳ ವಿಸ್ತಾರ ದೊಡ್ಡದು. ಶಾಸ್ತ್ರೀಯ ಸಂಗೀತದಲ್ಲಿ ಅವರಿಗೆ ವಿಶೇಷ ಆಸಕ್ತಿ. ಚಿತ್ರಗೀತೆಗಳಲ್ಲೂ ಶಾಸ್ತ್ರೀಯ ಸಂಗೀತದ ನೆರಳು ಹುಡುಕುವಂತಹ ಆಸಕ್ತಿಯದು.

ಶಾಸ್ತ್ರೀಯ ಸಂಗೀತದ ಸ್ಪರ್ಶವಿರುವ ರಾಜಕುಮಾರರ ಕುರಿತು ಸೊಗಸಾದ ಲೇಖನ ಬರೆದಿದ್ದಾರೆ. ಆ ಲೇಖನದ ಜೊತೆಗೆ ರಾಜ್ ಗೀತೆಗಳ ಇ-ಹಾಡು ಕೊಂಡಿಗಳಿವೆ, ದೃಶ್ಯಗಳಿವೆ. ಸಿ.ಅಶ್ವತ್ಥರ ಬಗ್ಗೆಯೂ ಒಂದು ಒಳ್ಳೆಯ ಬರಹ `ಹಂಸನಾದ'ದಲ್ಲಿದೆ.

ರಾಮ್ ಅನುವಾದದಲ್ಲಿ ಗಟ್ಟಿಗರಷ್ಟೇ; ಅವರು ಸ್ವತಃ ಕವಿತೆಯನ್ನೂ ಕಟ್ಟಬಲ್ಲರು. ಅವರು ಛಂದೋಪ್ರೇಮಿಯೂ ಹೌದು. `ಕವಿತೆ ಬರೆಯುವೆಯಾ?' ಎಂದು ಸವಾಲೆಸೆಯುವ ಗೆಳೆಯರು, ವಸ್ತುವನ್ನೋ ಚಿತ್ರವನ್ನೋ ಸೂಚಿಸಿದಾಗ ಅದಕ್ಕೆ ಪೂರಕವಾಗಿ ಛಂದೋಬದ್ಧವಾಗಿ ಪ್ರತಿಕ್ರಿಯೆ ರೂಪದಲ್ಲಿ ಕವಿತೆ ಬರೆಯಬಲ್ಲರು.

**ಅವರ ಭಾಮಿನಿ ಷಟ್ಪದಿಯ ಒಂದು ಕವಿತೆ ನೋಡಿ:**
ಹೊತ್ತು ಮುಳುಗಿತು ಸಂಜೆಯಾಯಿತು
ಮತ್ತೆ ಪೂರ್ವದಿ ಬಂದು ಚಂದಿರ
ನಿತ್ತಿಹನು ಗಗನದಲಿ ಜೊನ್ನದ ಸವಿಯ ಮಳೆಯನ್ನು
ಚಿತ್ತವಿನ್ನದರಿಂದ ಬೇರೆಡೆ
ಯೆತ್ತ ಪೋಪುದು? ಬಾನ ಹೆಣ್ಣಿನ
ಕುತ್ತಿಗೆಗೆ ಪದಕವದು ಮೇಣ್ ಪಾಡ್ಯಮಿಯ ಚಂದಿರನು!

ರಾಮ್‌ಪ್ರಸಾದ್ ಸೊಗಸಾದ ಹರಟೆಗಾರರೂ ಹೌದು. ನಯಾಗರಾ ಜಲಪಾತದ ಜಲವಿಲಾಸದ ಅದ್ಭುತದಲ್ಲೂ ಅಲ್ಲಿನ ತಿಂಡಿಯ ಗಾಡಿಗಳು, ವಿಶೇಷವಾಗಿ ಮಸಾಲೆದೋಸೆ ಅವರ ಕಣ್ಣಿನಿಂದ ತಪ್ಪಿಸಿಕೊಳ್ಳುವುದಿಲ್ಲ.

ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ನನಗದೆ ಕೋಟಿ ರೂಪಾಯಿ ಎನ್ನುವ ಮೈಸೂರ ಮಲ್ಲಿಗೆ ಕವಿ ಕೆ.ಎಸ್. ನರಸಿಂಹ ಸ್ವಾಮಿ ಕವಿತೆಯ ಸಾಲಿನ ಜಾಡು ಹಿಡಿದು ಹೆಂಡತಿಯರ ಕುರಿತು ಸೊಗಸಾದ ಪ್ರಮೇಯವನ್ನೇ ಮಂಡಿಸುತ್ತಾರೆ. ಅವರ, ಲಲನಾವಾದ ಲಹರಿಯ ಒಂದು ತುಣುಕು ಕೆಳಗಿನಂತಿದೆ:

84% off in San Jose
$99 for an In-Office Teeth Whitening Treatment ($625 value)
www.google.com/offers
Ads by Google


WI vs NZ SL vs PAK SCO vs CAN
West Indies vs New Zealand , 3rd ODI
Warner Park, Basseterre, St Kitts
WI 161-all out (34.3 Ovs)
New Zealand won by 88 runs
Detailed Score Commentary






Most Read Most Comment Most Rated
ಮನಮುಟ್ಟುವುದೇ `ಅರ್ಥಪೂರ್ಣ ಮಾತು'
ಹುಡ್ಕು: ಇನ್ನೊಂದು ಹುಡುಕುತಾಣ
ಅಪ್ಪ ಅಮ್ಮಂದಿರ ಹೊಸ ತಲೆಮಾರು
ಚಿನ್ನ ಸಾಲದ ವಹಿವಾಟು ಚೆನ್ನ
ಸಾಲದ ಬದುಕಿಗೆ `ಮೇಕ್'- ಮುಕ್ತಿ!
ಗುಲ್ಬರ್ಗವೆಂಬ ಸಿಮೆಂಟ್ ಸಾಮ್ರಾಜ್ಯ
ಸುತ್ತಾಮುತ್ತ............

ಚಿತ್ರ | ವಿಡಿಯೋ | ಆಡಿಯೋ










ದಾರಿತಪ್ಪುತ್ತಿದ್ದ ಗಂಡಸರನ್ನು ಸರಿದಾರಿಗೆ ತಂದವರು ಹಲವರು ಹೆಂಡಿರಾದರೆ, ಮತ್ತೆ ಸರಿಯಾದ ದಾರಿಯಲ್ಲೇ ಇದ್ದವರನ್ನು ಇನ್ನೂ ಸಾಧಕರನ್ನಾಗಿ ಮಾಡಿದವರು ಇನ್ನಷ್ಟು ಹೆಂಡಿರು. ಯಾವ ಕಲಾವಿದ, ಸಾಹಿತಿಯನ್ನು ತೆಗೆದುಕೊಂಡರೂ, ಅವರ ಯಶಸ್ಸಿನ ಹಿಂದೆ ಅವರವರ ಹೆಂಡತಿಯರ ಭಾರೀ ಕೈವಾಡವಿರುತ್ತೆ.

ಹಿಂದೆ ಸಾಕ್ರೆಟಿಸ್ ಅದಕ್ಕೇ ಹೇಳಿದ್ದು ಅಂತ ಕಾಣುತ್ತೆ- ಎಲ್ಲ ಗಂಡಸರೂ ಮದುವೆ ಆಗಲೇಬೇಕು. ಯಾಕಂದ್ರೆ, ಒಳ್ಳೇ ಹೆಂಡತಿ ಸಿಕ್ಕರೆ, ಜೀವನ ಉದ್ಧಾರ ಆಗುತ್ತೆ, ಕೆಟ್ಟ ಹೆಂಡತಿ ಸಿಕ್ಕರೆ ತನ್ನಂತೆ ತತ್ವಜ್ಞಾನಿ ಆಗಬಹುದು ಅಂದನಂತೆ, ಅವನು! ಅಂತೂ ಎಲ್ಲಾ ಹೆಂಡತಿಯರ ಮಹಿಮೆ ಅನ್ನೋದರಲ್ಲಿ ಅನುಮಾನವೇ ಇಲ್ಲ.

ರಾಮಕೃಷ್ಣ ಪರಮಹಂಸ ಅವರ ಜೀವನದಲ್ಲಿ ಅವರ ಹೆಂಡತಿ ಶಾರದಾದೇವಿ ಅವರ ಪಾತ್ರ, ಮಹಾತ್ಮಾ ಗಾಂಧಿಯವರಿಗೆ ಹೆಜ್ಜೆ ಹೆಜ್ಜೆಯಲ್ಲೂ ನೆರಳಾಗಿದ್ದ ಕಸ್ತೂರಬಾ ಮೊದಲಾದವರ ವಿಷಯಗಳೆಲ್ಲ ನಾವು ಕೇಳಿ ತಿಳಿದವುಗಳೇ ಆಗಿದೆ.
ಆದಿಕವಿ ವಾಲ್ಮೀಕಿಯ ಕಥೆಯನ್ನೇ ತೆಗೆದುಕೊಳ್ಳೋಣ.

ಮೊದಲು ಅವನು ಕಾಡುಮೇಡುಗಳಲ್ಲಿ ದಾರಿಹೋಕರ ತಲೆ ಒಡೆಯುವ ದರೋಡೆಕೋರನಾಗಿದ್ದನಂತೆ. ತಾನು ಮಾಡುತ್ತಿರುವುದೆಲ್ಲ ತನ್ನ ಹೆಂಡಿರುಮಕ್ಕಳಿಗಾಗಿ; ಹಾಗಾಗಿ, ತನ್ನ ಸಂಪಾದನೆಯಲ್ಲಿ ಅವರಿಗೆ ಹೇಗೆ ಪಾಲಿದೆಯೋ, ಹಾಗೇ ತನ್ನ ಪಾಪಕಾರ್ಯದಲ್ಲೂ ಅವರಿಗೆ ಪಾಲು ಇದ್ದೇ ಇದೆ ಎಂದು ಎಣಿಸಿದ್ದ. ಒಮ್ಮೆ ಈ ವಿಷಯವಾಗಿ ಹೆಂಡತಿಯನ್ನು ಕೇಳಬೇಕಾಗಿ ಬಂತು. ಆ ಮಹಾತಾಯಿ, `ಗಂಡನಾಗಿದ್ದು ನೀನು ನಮ್ಮನ್ನು ಸಾಕುವುದು ನಿನ್ನ ಧರ್ಮ.

ಹಾಗೆಂದು, ನೀನು ಸಿಕ್ಕಸಿಕ್ಕವರ ಕೊಲೆಮಾಡಿದರೆ, ಆ ಪಾಪವನ್ನೆಲ್ಲ ಅನುಭವಿಸಲು ನನ್ನದೇನು ಕರ್ಮ` ಎಂದು ಕೇಳೇಬಿಟ್ಟಳು. ಭ್ರಮೆಯಿಂದ ಮುಕ್ತನಾದ ಅವನು ತನ್ನ ಮೇಲೆ ಹುತ್ತವೇ ಬೆಳೆದುಕೊಳ್ಳುವಷ್ಟು ಭಾರೀ ತಪಸ್ಸು ಮಾಡಿ, ಮಹಾ ಜ್ಞಾನಿಯಾಗಿ ವಾಲ್ಮೀಕಿ ಅನ್ನುವ ಹೆಸರು ಪಡೆದ. ನಂತರ ರಾಮಾಯಣದಂತಹ ಮಹಾಕಾವ್ಯವನ್ನೂ ಬರೆದ. ಈಗ ನೋಡಿ, ಅವನ ಹೆಂಡತಿ ಅವನಿಗೆ ಬೇರೇನಾದರೂ ಉತ್ತರ ಕೊಟ್ಟಿದ್ದಿದ್ದರೆ, ರಾಮಾಯಣದಂತಹ ಕೃತಿ ನಮಗೆ ಸಿಗುತ್ತಿತ್ತೋ ಇಲ್ಲವೋ! ಹೆಂಡತಿಯ ಮಹಿಮೆ ಈಗ ನಿಮಗೆ ಕಂಡಿತೋ ಇಲ್ಲವೋ?

ಭಾಷೆಯ ಚಮತ್ಕಾರ, ಕಾವ್ಯದ ಸೊಗಸು, ಲೋಕ ವ್ಯಾಪಾರ, ಮನೋ ವಿಕಾಸ - ಹಲವು ಸಾಧ್ಯತೆಗಳ ರೂಪದಲ್ಲಿ `ಹಂಸನಾದ` ಬ್ಲಾಗ್ ಗಮನಸೆಳೆಯುತ್ತದೆ.

Like Send Be the first of your friends to like this.

Tweet 0

Comments (0)

[-] Text [+]




**Post Your Comments** **Language Selection** kannada

Name Email Id

Enter Security Code Security Code e6qx3ps

submit



ರಾಷ್ಟ್ರೀಯ | ರಾಜ್ಯ | ವಿದೇಶ | ವಾಣಿಜ್ಯ | ಕ್ರೀಡೆ | ಜಿಲ್ಲೆ | ಬೆಂಗಳೂರು | ಸಿನಿಮಾ | ಅಭಿಮತ | ಗ್ಯಾಲರಿ | ಸುಭಾಷಿತ | ಅಂಕಣಗಳು | ವಿಶೇಷ | ಇತ್ಯಾದಿ | ಬ್ಲಾಗ್

Home | About Us | Contact Us | Privacy Policy | Advertise with us | Disclaimer | Help | Feedback | Archives | Site Map

©

DECCAN HERALD ಸುಧಾ ಮಯೂರ CareerAvenues.in Broaden Your Career Bandwidth

2011 The Printers (Mysore) Private Ltd.,No 75, M.G Road, Post Box 5331, Bangalore - 560001

Design and developed by **4c Plus**